2006–07ನೇ ಸಾಲಿಗೆ ಬಿಜಾಪುರ ಜಿಲ್ಲೆಯ ರೈತರಿಗೆ ಕಬ್ಬಿನ ಪರಿಹಾರ ನೀಡುವ ಸಂಬಂಧ 2009–10ನೇ ಸಾಲಿನಲ್ಲಿ 1,21,78,724/– ರೂ.ಗಳ ಸಾಗಾಣಿಕೆ ಸಹಾಯಧನವನ್ನು ದಿನಾಂಕ 02.07.2009ರಂದು ಬಿಡುಗಡೆ ಮಾಡಲಾಗಿದೆ. ಬಾಕಿ ಉಳಿದ ಪರಿಹಾರಧನವನ್ನು ಬಿಡುಗಡೆ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ.

ಆ) ಪರಿಹಾರ ಧನ ವಿತರಿಸಲು ಸರ್ಕಾರಕ್ಕೆ ಇರುವ ತೊಂದರೆಗಳಾದರೂ ಏನು?

ಬಾಕಿ ಉಳಿದ ಪರಿಹಾರಧನ ಬಿಡುಗಡೆ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ.

ಇ) ಪರಿಹಾರ ಧನದ ಚೆಕ್ಕುಗಳನ್ನು ಎಂದು ವಿತರಿಸಲಾಗುವುದು?

ಬಾಕಿ ಉಳಿದ ಪರಿಹಾರಧನ ಬಿಡುಗಡೆ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ.

148 ಶ್ರೀ ಸಿದ್ದು ಸವದಿ

ಅ) ರಾಜ್ಯದಲ್ಲಿ ಶೇ.3ರ ಬಡ್ಡಿಯಂತೆ ವಿತರಿಸಿದ ಸಾಲವೆಷ್ಟು? ಯಾವ ಉದ್ದೇಶಕ್ಕಾಗಿ ವಿತರಿಸಲಾಗಿದೆ?

2008–09ನೇ ಸಾಲಿನಲ್ಲಿ ಸಹಕಾರಿ ಸಂಸ್ಥೆಗಳ ಮೂಲಕ ರಾಜ್ಯದ ರೈತರು, ಮೀನುಗಾರರು ಮತ್ತು ನೇಕರರಿಗೆ ಶೇ.3ರ ಬಡ್ಡಿದರದಲ್ಲಿ ಒಟ್ಟು ರೂ.3,60,755.62 ಲಕ್ಷ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ವಿತರಿಸಲಾಗಿದೆ. ಈ ಸಾಲವನ್ನು ಕೃಷಿ, ಮೀನುಗಾರಿಕೆ ಹಾಗೂ ನೇಕಾರಿಕೆ ಉದ್ದೇಶಗಳಿಗೆ ವಿತರಿಸಲಾಗಿರುತ್ತದೆ.

ಆ) ಹಾಗಿದ್ದಲ್ಲಿ, ನೇಕಾರರಿಗೆ ಒದಗಿಸಿದ ಸಾಲವೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಸಹಕಾರಿ ಸಂಸ್ಥೆಗಳು ನೇಕಾರರಿಗೆ ಒಟ್ಟು ರೂ.3,057.62 ಲಕ್ಷ ಸಾಲವನ್ನು ವಿತರಿಸಿರುತ್ತವೆ. ಲಭ್ಯವಿರುವ ಮಾಹಿತಿಯ ಪ್ರಕಾರ ಕೆಳಕಂಡ ಜಿಲ್ಲೆಗಳಲ್ಲಿ ನೇಕಾರಿಕೆ ಸಾಲಗಳನ್ನು ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರ.ಸಂ.	ಜಿಲ್ಲೆ	ಸಾಲದ ಮೊತ್ತ
1.	ಬೆಂಗಳೂರು ನಗರ ಜಿಲ್ಲೆ–2	278.28
2.	ತುಮಕೂರು	32.78
3.	ಬೆಳಗಾವಿ	466.15
4.	ಬಾಗಲಕೋಟೆ	1940.41
5.	ಕೊಪ್ಪಳ	5.00
	ಒಟ್ಟು	**3057.62**

ಇ) ಶೇ.3ರಂತೆ ಕೈಮಗ್ಗ ನೇಕಾರರಿಗೆ ಒದಗಿಸಿದ ಸಾಲವೆಷ್ಟು?

ಶೇ.3ರಂತೆ ಕೈಮಗ್ಗ ನೇಕಾರರಿಗೆ ರೂ.2,418.26 ಲಕ್ಷ ಸಾಲ ವಿತರಿಸಲಾಗಿದೆ.

ಈ) ನೇಕಾರರಿಗೆ ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ಕೊಡುವ ಯೋಜನೆ ಇದೆಯೇ?

ನೇಕಾರರಿಗೆ ಶೇ.3ರ ರಿಯಾಯಿತಿ ಬಡ್ಡಿ ದರದಲ್ಲಿ ಸಹಕಾರಿ ಸಂಸ್ಥೆಗಳ ಮೂಲಕ ಅಲ್ಪಾವಧಿ, ಮಧ್ಯಮಾವಧಿ ಮತ್ತು ದಿರ್ಘಾವಧಿ ಸಾಲಗಳನ್ನು ನೇಕಾರಿಕೆ ಉದ್ದೇಶಕ್ಕೆ ವಿತರಿಸುವ ಯೋಜನೆಯು ಪ್ರಸ್ತುತ ವರ್ಷದಲ್ಲೂ ಸಭೆ ಜಾರಿಯಲ್ಲಿರುತ್ತದೆ.

149 ಶ್ರೀ. ಸಿದ್ದು ಸವದಿ (ತೆರೆದಾಳ್)
ಶಿವರಾಜ್ ಎಸ್. ತಂಗಡಗಿ(ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು)

ಅ) ರಾಜ್ಯದಲ್ಲಿ ಕಬ್ಬು ಬೆಳೆಯುವ ಪ್ರದೇಶವೆಷ್ಟು ಹಾಗೂ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)?

ರಾಜ್ಯದಲ್ಲಿ 2008–09ನೇ ಸಾಲಿನಲ್ಲಿ ಒಟ್ಟು 3.75 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆಯಲಾಗಿದೆ. ಜಿಲ್ಲಾವಾರು ವಿವರ ಲಗತ್ತಿಸಿದೆ. (ಅನುಬಂಧ–1)

ರಾಜ್ಯದಲ್ಲಿ ಒಟ್ಟು 61 ಸಕ್ಕರೆ ಕಾರ್ಖಾನೆಗಳಿದ್ದು ಆ ಪೈಕಿ 2008–09ನೇ ಸಾಲಿನಲ್ಲಿ 49 ಕಾರ್ಖಾನೆಗಳು ಕಾರ್ಯ ನಿರ್ವಹಿಸಿರುತ್ತವೆ. ಜಿಲ್ಲಾವಾರು ವಿವರ ಲಗತ್ತಿಸಿದೆ. (ಅನುಬಂಧ–2)

ಆ) ಪ್ರಸಕ್ತ ವರ್ಷದಲ್ಲಿ ರೈತರು ಬೆಳೆದ ಕಬ್ಬಿಗೆ ಕೊಡಲು ಇಚ್ಚಿಸಿದ ಸಹಾಯ ಧನವೆಷ್ಟು; ಅದರ ರೂಪರೇಷೆಗಳೇನು?

ಪ್ರಸಕ್ತ ವರ್ಷದಲ್ಲಿ ರೈತರು ಬೆಳೆದ ಕಬ್ಬಿಗೆ ಯಾವುದೇ ಸಹಾಯಧನ ಸೌಲಭ್ಯವನ್ನು ಸರ್ಕಾರವು ಘೋಷಿಸಿರುವುದಿಲ್ಲ.

ಇ) ವೈಜ್ಞಾನಿಕವಾಗಿ ಕಡಿಮೆ ನೀರು ಬಳಸಿ ಕಬ್ಬು ಬೆಳೆಸಲು ರೈತರಿಗೆ ನೀಡುತ್ತಿರುವ ಮಾರ್ಗದರ್ಶನಗಳೇನು?

1. ಲಘು ನೀರಾವರಿ ಕ್ರಮಗಳಾದ ಹನಿ ನೀರಾವರಿ, ತುಂತುರು ನೀರಾವರಿ, ರೈನ್ ಗನ್ ಪದ್ಧತಿಗಳನ್ನು ಅಳವಡಿಸಿ ನೀರಿನ ಬಳಕೆ ಪ್ರಮಾಣವನ್ನು ಕಡಿಮೆ ಮಾಡಬಹುದು.
2. ಕಬ್ಬಿನ ತರಗನ್ನು ಹೊದಿಕೆಯಾಗಿ ಬಳಸಿ ತೇವಾಂಶ ಕಾಪಾಡುವುದು.